MS – 015

**VI Semester B.A. Examination, May 2011**
**(Freshers Scheme)**
**ಐಚ್ಛಿಕ ಕನ್ನಡ**
**(ಪತ್ರಿಕೆ - 7) ಬಹುಮುಖಿ - 2**

Time : 3 Hours                                                                 Max. Marks : 90

I. ಅ) ಈ ಪದ್ಯ ಭಾಗವನ್ನು ಆಧರಿಸಿ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ. **(1×4=4)**

ಗುಣಿಗಳ ಗುಣರತ್ನಂ ವಿಭೂ
ಷಣ ಮೆಸೆವುದೆ ವಿಕಳ ಹೃದಯರಾದವರ್ಗೆ ನೃಪಾ
ಗ್ರಣಿ ಪೇೞ್ ತುಪ್ಪೇರಿದ ದ
ರ್ಪಣದೊಳ್ ಪಜ್ಜಳಿಸಲಾರ್ಪುದೆ ಪ್ರತಿಬಿಂಬಂ

೧) ಈ ಪದ್ಯ ರಚಿಸಿದ ಕವಿಯ ಹೆಸರನ್ನು ತಿಳಿಸಿರಿ.
೨) ಈ ಪದ್ಯದ ಬಗೆಗೆ ಒಂದು ಪ್ರಶ್ನೆ ರೂಪಿಸಿ.
೩) 'ದರ್ಪಣ' ಈ ಪದದ ಇನ್ನೆರಡು ಸಮಾನಾರ್ಥಕ ಪದ ಬರೆಯಿರಿ.
೪) ವಿಕಳ, ಪಜ್ಜಳಿಸು ಈ ಪದಗಳಿಗೆ ಅರ್ಥ ಬರೆಯಿರಿ.
೫) ಪಜ್ಜಳಿಸಲಾರ್ಪುದೆ ಪ್ರತಿಬಿಂಬಂ ಎಂಬುದರ ಭಾವವೇನು ?

ಆ) ಎರಡು ಪ್ರಶ್ನೆಗಳಿಗೆ ಉತ್ತರಿಸಿ. **(2×2=4)**

೧) ಮಾರಿಜಾತ್ರೆಯ ಪ್ರಸಂಗದ ವಸಂತ ವರ್ಣನೆಯನ್ನು ಬರೆಯಿರಿ.
೨) ಗಾನರಾಣಿಯರು ಹೇಗಿದ್ದರು ?
೩) ತನ್ನ ಹಿಂದೆ ಬಂದರೆ ಏನೇನು ಮಾಡಬೇಕಾಗುತ್ತದೆ ಎಂದು ಹಾರುವಯ್ಯನಿಗೆ ಮಾದಿಗಿತ್ತಿ ಹೇಳುತ್ತಾಳೆ ?
೪) ಸಿರುಮನ ರಾಣಿ ಚಿಕ್ಕಮ್ಮ ಯುದ್ಧದಲ್ಲಿ ತೊಡಗಿದ್ದು ಹೇಗೆ ?

ಇ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(2×2=4)**

೧) ಜನ್ನ    ೨) ವಿಲೋಮ ವಿವಾಹ    ೩) ರತ್ನಾಜಿ

ಈ) ಎರಡು ಪ್ರಶ್ನೆಗಳಿಗೆ ಉತ್ತರಿಸಿ. **(2×3=6)**

೧) ಗಾನರಾಣಿಯರು ಮತ್ತು ಮಾದಿಗಿತ್ತಿ ಪ್ರಸಂಗವನ್ನು ತೌಲನಿಕವಾಗಿ ವಿವೇಚಿಸಿ.
೨) ಮಾರಿಜಾತ್ರೆಯ ಸಂದರ್ಭದ ವಸಂತ ವರ್ಣನೆಯ ಔಚಿತ್ಯ ತಿಳಿಸಿಕೊಡಿ.
೩) ಸಾಂಗತ್ಯ ಛಂದಸ್ಸಿನ ಲಕ್ಷಣಗಳನ್ನು ಉದಾಹರಣೆಯೊಡನೆ ನಿರೂಪಿಸಿ.
೪) ನಳಿನನಾಳದ ನೂಲು ಮತ್ತು ಸೊಕ್ಕಿನ ಆನೆಗಳ ಹೋಲಿಕೆಗಳ ಔಚಿತ್ಯವನ್ನು ರತ್ನಾಜಿ ಪಾತ್ರದ ಹಿನ್ನೆಲೆಯಲ್ಲಿ ಚರ್ಚಿಸಿ.

P.T.O.

http://www.onlinebu.com



II. ಅ) ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. (1×4=4)

೧) ಪಂಪನ ಪ್ರಸಿದ್ಧ ಜಿನಾಗಮ ಕೃತಿಯ ಹೆಸರೇನು ?

೨) ವಡ್ಡಾರಾಧನೆಯನ್ನು ಬರೆದವರು ಯಾರು ?

೩) ಕಾರ್ತೀಕ ಋಷಿಯ ತಂದೆ ಯಾರು ?

೪) ವಿಷ್ಣು ಶರ್ಮನ ಪ್ರಸಿದ್ಧ ಕೃತಿ ಯಾವುದು ?

ಆ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. (2×4=8)

೧) ಪಂಪನು ಅರಿಕೇಸರಿಯನ್ನು ಅರ್ಜುನನಿಗೆ ಹೇಗೆ ಹೋಲಿಸಿದ್ದಾನೆ ?

೨) ಕಾರ್ತೀಕ ಋಷಿಯ ವೈರಾಗ್ಯಕ್ಕೆ ಕಾರಣವೇನು ?

೩) ಕನ್ನಡದ ಮೇಲೆ ಸಂಸ್ಕೃತ ಪ್ರಾಕೃತಗಳ ಪ್ರಭಾವವನ್ನು ಕುರಿತು ಬರೆಯಿರಿ.

೪) ದುರ್ಗಸಿಂಹನ ಕಥನದ ಸರಳತೆಗೂ ವಸ್ತುವಿಗೂ ಇರುವ ಸಂಬಂಧವನ್ನು ಗುರುತಿಸಿ.

ಇ) ಒಂದು ಪ್ರಶ್ನೆಗೆ ಉತ್ತರಿಸಿ. (1×6=6)

೧) ಟಿಪ್ಪುವಿಗೆ ಬರೆದ ಸಾಹೇಬರ ಪತ್ರದ ಮುಖ್ಯಾಂಶಗಳನ್ನು ತಿಳಿಸಿ.

೨) ಎರಡು ಗಿಳಿಗಳ ಕಥೆಯ ಸ್ವಾರಸ್ಯವೇನು ?

೩) ಮುದ್ದಣ – ಮನೋರಮೆಯರ ಪ್ರಸಂಗವು ಸಂಪ್ರದಾಯ ಮತ್ತು ಆಧುನಿಕತೆಗಳ ಸಂಘರ್ಷವೇ ? ವಿವೇಚಿಸಿ.

III. ಅ) ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. (1×4=4)

೧) ಪಂಪನ ಕಾವ್ಯದಲ್ಲಿ ಜೀವನ ತತ್ವ ಜಿಜ್ಞಾಸೆಯು ಎಷ್ಟು ಹಂತಗಳಲ್ಲಿ ಬೆಳೆಯುತ್ತದೆ ?

೨) ಇಬ್ಬರು ಪ್ರಸಿದ್ಧ ಗ್ರೀಕ್ ತತ್ವಜ್ಞಾನಿಗಳನ್ನು ಹೆಸರಿಸಿ.

೩) ಮನಃ ಶಾಸ್ತ್ರೀಯ ಹಿನ್ನೆಲೆಯ ಕನ್ನಡದ ಯಾವುದಾದರೊಂದು ಕೃತಿಯ ಹೆಸರನ್ನು ತಿಳಿಸಿ.

೪) ಅಭಿವ್ಯಕ್ತಿ ವಾದವನ್ನು ಪ್ರತಿಪಾದಿಸಿದ ಕಾವ್ಯ ಮೀಮಾಂಸಕ ಯಾರು ?

ಆ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. (2×4=8)

೧) ಅನ್ಯಜ್ಞಾನ ಶಿಸ್ತು ಎಂದರೇನು ? ಅನ್ಯಜ್ಞಾನಗಳೊಂದಿಗೆ ಸಾಹಿತ್ಯಕ್ಕಿರುವ ಸಂಬಂಧವನ್ನು ವಿವರಿಸಿ.

೨) ಕಲ್ಗುಡಿಯವರು ಪಂಪನ ಕಾವ್ಯವನ್ನು ಯಾವ ಹಿನ್ನೆಲೆಯಲ್ಲಿ ಅರ್ಥೈಸಿದ್ದಾರೆ ? ವಿವೇಚಿಸಿ.

೩) ಕಾರ್ಲ್ ಮಾರ್ಕ್ಸ್ ಪ್ರತಿಪಾದಿಸಿದ ದ್ವಂದ್ವ ಭಾವಗಳು ಯಾವುವು ?

೪) ಸಾಹಿತ್ಯ ವಿಮರ್ಶೆಯಲ್ಲಿ ಮನೋವಿಜ್ಞಾನವನ್ನು ಬಳಸಿಕೊಳ್ಳುವ ಹಂತಗಳನ್ನು ಕುರಿತು ವಿಚಾರ ಮಾಡಿ.

ಇ) ಒಂದು ಪ್ರಶ್ನೆಗೆ ಉತ್ತರಿಸಿ. (1×6=6)

೧) ಕನ್ನಡ ಸಾಹಿತ್ಯಕ್ಕೂ ಮತಧರ್ಮಕ್ಕೂ ಇರುವ ಸಂಬಂಧವನ್ನು ನಿರೂಪಿಸಿ.

೨) ಮಾರ್ಗ ಮತ್ತು ದೇಸಿಗಳ ಸಂಬಂಧದ ವಿವಿಧ ನೆಲೆಗಳನ್ನು ಕುರಿತು ಬರೆಯಿರಿ.

೩) ಸಾಹಿತ್ಯ ಮತ್ತು ಮನಃಶಾಸ್ತ್ರ ಸಂಬಂಧವನ್ನು ಎಚ್.ಎಸ್. ಆರ್. ಹೇಗೆ ವಿವರಿಸಿದ್ದಾರೆ ? ಸಂಗ್ರಹಿಸಿ ಬರೆಯಿರಿ.

www.onlinebu.com

http://www.onlinebu.com http://www.onlinebu.com

http://www.onlinebu.com



IV. ಅ) ಈ ಕೆಳಗಿನ ನಾಲ್ಕು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. (1×4=4)

೧) ಶ್ರೀಮಂತ ಜಮೀನ್ದಾರಿ ಶಿಕಾರಿ ಸಂಪ್ರದಾಯವನ್ನು ಎಲ್ಲಿ ಕಾಣಬಹುದು ?

೨) ಮೊದಲ ಅಂತಾರಾಷ್ಟ್ರೀಯ ಪರಿಸರ ಸಮಾವೇಶ ಎಲ್ಲಿ ಜರುಗಿತು ?

೩) "ಬೇಟೆಯ ಕ್ರೀಡೆಯ ನಿರ್ವಹಣೆ" ಎಂಬ ತತ್ವಗಳನ್ನು ಅಭಿವೃದ್ಧಿ ಪಡಿಸಿದವರು ಯಾರು ?

೪) ಮೊದಲ ಬಹುರಾಷ್ಟ್ರಗಳ ವನ್ಯಜೀವಿ ಸಂರಕ್ಷಣಾ ಸೊಸೈಟಿ ಸ್ಥಾಪನೆಯಾದ ವರ್ಷ ಯಾವುದು ?

೫) ಜಪಾನಿನ ಪ್ರಸಿದ್ಧ ಕೃಷಿ ವಿಜ್ಞಾನಿ ಯಾರು ?

೬) ಮೇದರಳ್ಳಿ ಗ್ರಾಮ ಮುಂಚೆ ಯಾವುದಕ್ಕೆ ಪ್ರಸಿದ್ಧಿ ಪಡೆದಿತ್ತು ?

೭) ಸಾಂಸ್ಕೃತಿಕ ಉದ್ದಿಮೆ ಎಂದರೆ ಯಾವುದು ?

೮) ಗ್ರಾಮ ಕೈಗಾರಿಕೆಗಳನ್ನು ಏಕೆ ಗೆಲ್ಲಿಸಬೇಕು ?

ಆ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. (2×4=8)

೧) ಆಫ್ರಿಕದಲ್ಲಿನ ವನ್ಯ ಪ್ರಾಣಿಗಳ ಸಂಕಷ್ಟಕ್ಕೆ ಕಾರಣವೇನು ? ತಿಳಿಸಿ.

೨) ಅಲ್ಡೋ ಲಿಯೋಪೋಲ್ಡ್‌ನ ಪರಿಸರ ಚಿಂತನೆಯನ್ನು ಪರಿಚಯಿಸಿ.

೩) ಫುಕುವೋಕಾ ಉಪಯುಕ್ತತೆಯ ಮೌಲ್ಯವನ್ನು ಹೇಗೆ ಪ್ರಶ್ನಿಸುತ್ತಾನೆ ?

೪) ಯಂತ್ರಗಳ ಮೇಲಿನ ಅವಲಂಬನೆ ಮನುಷ್ಯನಿಗೆ ಅನಿವಾರ್ಯವೇ ? ವಿಚಾರ ಮಾಡಿ.

ಇ) ಒಂದು ಪ್ರಶ್ನೆಗೆ ಉತ್ತರಿಸಿ. (1×6=6)

೧) ಪರಿಸರ ಚಿಂತನೆಗೆ ಜಾನ್‌ಮುಯಿರ್‌ನ ಕೊಡುಗೆ ಏನು ? ಸೋದಾಹರಣವಾಗಿ ವಿವರಿಸಿ.

೨) ಗ್ರಾಮಕೈಗಾರಿಕೆಗೂ ಬೃಹತ್ ಕೈಗಾರಿಕೆಗೂ ಇರುವ ವ್ಯತ್ಯಾಸವನ್ನು ಪಟ್ಟಿಮಾಡಿ.

V. ಅ) ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. (1×4=4)

೧) ಕನ್ನಡದಲ್ಲಿ ಆಧುನಿಕ ಭಾಷಾಂತರ ಯುಗ ಯಾವಾಗ ಪ್ರಾರಂಭವಾಯಿತು ?

೨) ಇಪ್ಪತ್ತೊಂದನೆ ಶತಮಾನ ಯಾವ ಸಂಸ್ಕೃತಿ ಪರವಾಗಿದೆ ?

೩) ಡಾ || ಹೆಚ್.ಎಂ. ಮರುಳ ಸಿದ್ಧಪ್ಪನವರು (Slum) ಪದಕ್ಕೆ ಏನೆಂದು ಅನುವಾದಿಸಿದ್ದಾರೆ ?

೪) ಡೈಗ್ಲಾಸಿಯಾ ಎಂದರೇನು ?

ಆ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. (2×4=8)

೧) ಭಾಷಾಂತರ ಪ್ರಕ್ರಿಯೆಯ ಮಹತ್ವವನ್ನು ವಿವರಿಸಿ.

೨) ಕನ್ನಡದ ಭಾಷಾಂತರ ಆರಂಭಯುಗದಲ್ಲಿ ಭಾಷಾಂತರಗೊಂಡ ಕೃತಿಗಳಾವುವು ? ಪಟ್ಟಿಮಾಡಿ.

೩) ದಿನ ಪತ್ರಿಕೆಗಳಲ್ಲಿ ಅನುವಾದದ ಅಗತ್ಯವೇನು ? ವಿಚಾರ ಮಾಡಿ.

೪) ಆಡಳಿತ ಭಾಷೆಯಾಗಿ ಕನ್ನಡದ ರಾಜಕೀಯ ಹಿನ್ನೆಲೆಯನ್ನು ಕುರಿತು ಬರೆಯಿರಿ.

ಇ) ಒಂದು ಪ್ರಶ್ನೆಗೆ ಉತ್ತರಿಸಿ. (1×6=6)

೧) ಭಾಷಾಂತರ ಪ್ರಕ್ರಿಯೆ ಭಾಷೆ ಅಭಿವೃದ್ಧಿಗೆ ಹೇಗೆ ಪೂರಕವಾಗಿದೆ ವಿಚಾರ ಮಾಡಿ.

೨) ಅನುವಾದ ಹೇಗಿರಬೇಕೆಂದು ಚರ್ಚೆಗೊಂಡಿದೆ ? ವಿವರಿಸಿ.

೩) ಎಫ್. ಎಮ್. ಕನ್ನಡ ಭಾಷೆಯ ಬಗ್ಗೆ ಇರುವ ಅಭಿಪ್ರಾಯಗಳನ್ನು ಬರೆಯಿರಿ.

http://www.onlinebu.com



**MS – 015**

## VI Semester B.A. Examination, May 2011
## (Repeaters Scheme)
### ಕನ್ನಡ ಐಚ್ಛಿಕ
### ಪತ್ರಿಕೆ – VII : ಆಧುನಿಕ ಕನ್ನಡ ಕಥಾಸಂಗ್ರಹ ಮತ್ತು ಹೊಸಗನ್ನಡ ಕಥಾಸಾಹಿತ್ಯ ಚರಿತ್ರೆ

Time : 3 Hours　　　　Max. Marks : 90

I. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ. **(15×4=60)**

1) ವೆಂಕಟಶಾಮಿಯ ಪ್ರಣಯ ದುರಂತದಲ್ಲಿ ಮುಕ್ತಾಯವಾಗಲು ಕಾರಣಗಳೇನು ? ವಿವರಿಸಿ.
2) 'ಅವನತಿ' ಕಥೆಯ ಆಶಯವನ್ನು ಚರ್ಚಿಸಿ.
3) 'ನರಬಲಿ' ಕಥೆಯಲ್ಲಿ ಚಿತ್ರಿತವಾಗಿರುವ ಸ್ತ್ರೀಸಂವೇದನೆಯನ್ನು ಪರಿಚಯಿಸಿ.
4) ಬೇಬಿ ಮತ್ತು ಮುಕುಂದಣ್ಣನ ಸಂಬಂಧದ ವಿನ್ಯಾಸಗಳನ್ನು ವಿಮರ್ಶಿಸಿ.
5) ಕೌಟುಂಬಿಕ ಸಂಬಂಧಗಳು 'ಸ್ಟೆಲ್ಲಾ ಎಂಬ ಹುಡುಗಿ' ಕಥೆಯಲ್ಲಿ ಹೇಗೆ ಚಿತ್ರಿತವಾಗಿವೆ ?
6) ಅಮಾಸನು ಶೋಷಣೆಗೆ ಒಳಗಾದ ಬಗೆಯನ್ನು ನಿರೂಪಿಸಿ.

II. ಯಾವುದಾದರೂ ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ. **(5×2=10)**

1) ವಡವಟ್
2) 'ಕಳ್ಳುಬಳ್ಳಿ' ಯಲ್ಲಿರುವ ಹುಟ್ಟುಹಬ್ಬದ ಪ್ರಸಂಗ
3) ಝೋಪಡ ಪಟ್ಟಿಯ ಜಾನಕಿ
4) ರೈಲ್ವೆ ಗ್ಯಾಂಗ್‌ಮನ್ ಸಿದ್ಧಪ್ಪ

III. ಒಂದು ಪ್ರಶ್ನೆಗೆ ಉತ್ತರಿಸಿ. **(10×1=10)**

1) ಕನ್ನಡ ಕಥಾಸಾಹಿತ್ಯದ ಪ್ರಮುಖ ಘಟ್ಟಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿ.
2) ಕನ್ನಡ ಕಥಾಸಾಹಿತ್ಯಕ್ಕೆ ಕುಂ. ವೀರಭದ್ರಪ್ಪ ಮತ್ತು ದೇವನೂರು ಮಹಾದೇವರವರ ಕೊಡುಗೆಯನ್ನು ವಿವರಿಸಿ.

IV. ಯಾವುದಾದರೂ ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ. **(5×2=10)**

1) ಬರಗೂರು ರಾಮಚಂದ್ರಪ್ಪ
2) ಸ್ತ್ರೀ ಸಂವೇದನೆ
3) ರಾಘವೇಂದ್ರ ಖಾಸನೀಸ
4) ಪಿ. ಲಂಕೇಶ್.

http://www.onlinebu.com
http://www.onlinebu.com